# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **370** |
| ಸದಸ್ಯರ ಹೆಸರು | : | ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರು) |
| ಉತ್ತರಿಸಬೇಕಾದ ದಿನಾಂಕ | : | 23-09-2020 |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ಬೆಳಗಾವಿ ಜಿಲ್ಲೆಯ ವಿವಿಧ ತಾಲೂಕುಗಳು ಆಗಸ್ಟ 19ರ ಭೀಕರ ಪ್ರವಾಹದಿಂದ ತತ್ತರಿಸಿದ್ದು, ಅದರಿಂದ ಮನೆಗಳನ್ನು ಕಳೆದುಕೊಂಡು ಬೀದಿಗೆ ಬಿದ್ದ ಸಾವಿರಾರು ನಿರಾಶ್ರಿತರಿಗೆ ಈವರೆಗೂ ಪರಿಹಾರ ಸಿಗದೆ ಸರ್ಕಾರಿ ಕಚೇರಿಗಳಿಗೆ ಅಲೆದಾಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;<br><br>(ಆ) ಹಾಗಿದ್ದಲ್ಲಿ, ಪ್ರವಾಹದಲ್ಲಿ ಮನೆಗಳನ್ನು ಕಳೆದುಕೊಂಡಿರುವ, ಸೂರಿಲ್ಲದ ನಿರಾಶ್ರಿತರಿಗೆ ಮನೆಗಳನ್ನು ನಿರ್ಮಿಸಿಕೊಳ್ಳಲು ಸರ್ಕಾರ ಯಾವಾಗ ಪರಿಹಾರ ಒದಗಿಸಿ, ಅಗತ್ಯ ಕ್ರಮ ಕೈಗೊಳ್ಳುವುದು ; | ಬೆಳಗಾವಿ ಜಿಲ್ಲೆಯ ವಿವಿಧ ತಾಲೂಕುಗಳು ಆಗಸ್ಟ 19ರ ಭೀಕರ ಪ್ರವಾಹದಿಂದ ತತ್ತರಿಸಿದ್ದು, ಅನೇಕ ಕುಟುಂಬಗಳು ನಿರ್ವಸತಿಕರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಈ ಕೆಳಕಂಡಂತೆ ಕ್ರಮವಹಿಸಲಾಗಿದೆ.<br><br>2019ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಅತಿವೃಷ್ಟಿ/ಪ್ರವಾಹದಿಂದ ಹಾನಿಗೊಳಗಾದ ಮನೆಗಳ ಪ್ರಕರಣಗಳಿಗೆ ಸಂಬಂಧಿಸಿದಂತೆ;<br><br>'ಎ' ವರ್ಗೀಕರಣದ 5916 ಸಂತ್ರಸ್ತರಿಗೆ ರೂ.155.47 ಕೋಟಿ,<br><br>ಬಿ-1 ವರ್ಗೀಕರಣದ 11190 ಸಂತ್ರಸ್ತರಿಗೆ ರೂ.283.32 ಕೋಟಿ,<br><br>ಬಿ-2 ವರ್ಗೀಕರಣದ 454 ಸಂತ್ರಸ್ತರಿಗೆ ರೂ.6.81 ಕೋಟಿ,<br><br>'ಸಿ' ವರ್ಗೀಕರಣದ 26789 ಸಂತ್ರಸ್ತರಿಗೆ ರೂ.132.98 ಕೋಟಿಗಳ ಮೊತ್ತದ ಪರಿಹಾರ ಧನವನ್ನು ವಿತರಿಸಲಾಗಿದೆ.<br><br>ಈ ಪ್ರಕರಣಗಳನ್ನು ಹೊರತುಪಡಿಸಿ, ಆಗಸ್ಟ 2019ರಲ್ಲಿ ಉಂಟಾದ ಪ್ರವಾಹದಿಂದ ಹಾನಿಗೊಳಗಾದ ಮನೆಗಳ ಪೈಕಿ ಆಧಾರ್ ಕಾರ್ಡ್ ಮತ್ತು ರೇಷನ್‌ಕಾರ್ಡ್ ಲಭ್ಯವಿಲ್ಲದ, ಕುಟುಂಬಗಳಲ್ಲಿ ತಕರಾರುಗಳಿದ್ದ ವಾಸ ಸಮಸ್ಯೆ ಹಾಗೂ ಇನ್ನಿತರ ಕಾರಣಗಳಿಂದ ಜಿಲ್ಲೆಯ ಒಟ್ಟು 9092 ಪ್ರಕರಣಗಳನ್ನು ಆರ್‌ಜಿಆರ್‌ಹೆಚ್‌ಸಿಎಲ್ (RGRHCL) ತಂತ್ರಾಂಶದಲ್ಲಿ ಅಳವಡಿಸುವುದು ಬಾಕಿಯಿರುತ್ತದೆ. |

...೭

| | |
|---|---|
| (ಇ) ಸೂರುಗಳನ್ನು ಕಳೆದುಕೊಂಡ ನಿರಾಶ್ರಿತರು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಧರಣಿ ಕುಳಿತಾಗ ಜಿಲ್ಲಾಧಿಕಾರಿಗಳು ಸಂಬಂಧಿಸಿದ ವಿಭಾಗಾಧಿಕಾರಿಗಳಿಂದ ವರದಿ ತರಿಸಿ, ಪರಿಶೀಲಿಸಿ ಸರ್ಕಾರಕ್ಕೆ ಸಲ್ಲಿಸಿದ ಮನವಿ ಏನಾಯಿತು; | ಆಗಸ್ಟ್-2019 ರ ಪ್ರವಾಹದಲ್ಲಿ ಹಾನಿಗೊಳಗಾದ ಮನೆಗಳ ಪೈಕಿ ದಾಖಲೆಗಳಿಲ್ಲದ – ಆಧಾರ್ ಕಾರ್ಡ್, ಬಿಪಿಎಲ್ ಕಾರ್ಡ್, ತಕರಾರುಗಳಿರುವ ಮತ್ತು ವಾರಸುದಾರರ ಸಮಸ್ಯೆಗಳಿರುವ ಹಾಗೂ ಇನ್ನಿತರೆ ಕಾರಣಗಳಿಂದ ದಾಖಲೆ ಇಲ್ಲದಿರುವಂತಹ ಮನೆಗಳ ವಿವರಗಳನ್ನು ಪರಿಹಾರಕ್ಕಾಗಿ ತಂತ್ರಾಂಶದಲ್ಲಿ ಅಳವಡಿಸುವ ಕುರಿತು ಸುಧೀರ್ಘವಾಗಿ ವಸತಿ ಇಲಾಖೆಯೊಂದಿಗೆ ಚರ್ಚಿಸಿ ಈಗಾಗಲೇ 2019ನೇ ಸಾಲಿನಲ್ಲಿಯೇ ಮನೆ ಹಾನಿ ವಿವರದ ಕುರಿತು ಪರಿಹಾರ ಪಾವತಿಗೆ ಅಪ್‌ಲೋಡ್ ಮಾಡಲು ಅಗತ್ಯ ಕಾಲಾವಕಾಶ ನೀಡಲಾಗಿದ್ದು, ಪುನಃ ದಾಖಲೆಗಳು ಇಲ್ಲದಂತಹ ಮನೆಗಳ ಹಾನಿಗೆ ಹಾಗೂ ಇತರೆ ಕಾರಣಗಳಿಂದ ದಾಖಲೆ ಸಲ್ಲಿಸಲು/ಅಪ್‌ಲೋಡ್ ಮಾಡಲು ಅವಧಿ ವಿಸ್ತರಿಸುವ/ಅವಕಾಶ ಕಲ್ಪಿಸುವ ಕ್ರಮ ಉದ್ಭವಿಸುವುದಿಲ್ಲ. ಆದ್ದರಿಂದ ಇಂತಹ ಪ್ರಸ್ತಾವನೆಗಳನ್ನು ತಿರಸ್ಕರಿಸಲು ದಿನಾಂಕ:31.08.2020ರಂದು ನಡೆದ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. |
| (ಈ) ಜಿಲ್ಲಾಧಿಕಾರಿಗಳ ವರದಿಯ ಅನುಷ್ಠಾನ ಯಾವ ಹಂತದಲ್ಲಿದೆ; ಯಾವ ಕಾಲಮಿತಿಯಲ್ಲಿ ನೊಂದ ನಿರಾಶ್ರಿತರಿಗೆ ಸೂರು ಕಟ್ಟಿಕೊಳ್ಳಲು ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಲಾಗುವುದು? (ವಿವರ ಒದಗಿಸುವುದು) | |

*ಕಂಇ 427 ಟಿಎನ್‌ಆರ್ 2020*

**(ಆರ್. ಅಶೋಕ)**
ಕಂದಾಯ ಸಚಿವರು